

ಸುಮಾರು ಐದು ತಿಂಗಳ ನಂತರ ಮೇಲಧಿಕಾರಿಗಳು ಕರೆ ಮಾಡಿ ತುರ್ತಾಗಿ ಕಚೇರಿ ಬಳಿ ವರದಿ ಮಾಡಿಕೊಳ್ಳಲು ಸೂಚಿಸಿದರು. ಸಾಮಾನ್ಯವಾಗಿ ಯಾವುದಾದರೂ ರಹಸ್ಯ ದಾಳಿ, ವಿಶೇಷ ಕಾರ್ಯಾಚರಣೆಗಳಿದ್ದಾಗ ಈ ರೀತಿಯ ಕರೆ ಬರುವುದುಂಟು. ನಾನು ಸಿದ್ಧವಾಗಿ ಕಚೇರಿ ಬಳಿ ಬಂದು ವರದಿ ಮಾಡಿಕೊಂಡಾಗ, ಈ ದಿನ ಅನಿರೀಕ್ಷಿತವಾಗಿ ಜೈಲಿಗೆ ಭೇಟಿ ನೀಡುವ ಕಾರ್ಯಕ್ರಮ ಇದು ಎಂದು ಗೊತ್ತಾಯಿತು.

ಕಾರಾಗೃಹದಲ್ಲಿ ಯಾವುದೇ ರೀತಿಯ ಕಾನೂನುಬಾಹಿರ ಚಟುವಟಿಕೆಗಳು ನಡೆಯದಂತೆ ಕಡಿವಾಣ ಹಾಕಲು ಹಾಗೂ ಅಂತಹ ಚಟುವಟಿಕೆ ನಡೆದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಪೊಲೀಸರು ಕಾರಾಗೃಹಕ್ಕೆ ಅನಿರೀಕ್ಷಿತ ಭೇಟಿ ನೀಡುವುದು ಹಾಗೂ ದಾಳಿ ನಡೆಸುವುದುಂಟು. ಅಂತಹ ಸಮಯದಲ್ಲಿ ಗಾಂಜಾ (ಸಿಗರೇಟ್), ಮೊಬೈಲ್, ಆಯುಧಗಳು, ಹಣ ಮುಂತಾದ ವಸ್ತುಗಳು ದೊರೆತರೆ ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಇದೊಂದು ನಿಯಮಿತವಾಗಿ ನಡೆಯುವ ಪ್ರಕ್ರಿಯೆ. ಇದರಿಂದಾಗಿ ಕಾರಾಗೃಹದ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ಮೇಲಧಿಕಾರಿಯ ನೇತೃತ್ವದಲ್ಲಿ ಅಧಿಕಾರಿ ಸಿಬ್ಬಂದಿಗಳ ತಂಡ ಕಾರಾಗೃಹಕ್ಕೆ ಭೇಟಿ ನೀಡಿ, ಅಲ್ಲಿನ ಬ್ಯಾರಕ್‌ಗಳಲ್ಲಿರುವ ಬಂಧಿಗಳ ವಸ್ತುಗಳ ಪರಿಶೀಲನೆಯಲ್ಲಿ ತೊಡಗಿದೆವು. ಸಿಬ್ಬಂದಿ ತಪಾಸಣೆ ನಡೆಸುವಾಗ ನನ್ನ ಗಮನ ಸುಮಾರು ಇಪ್ಪತ್ತೆರಡರ ವಯಸ್ಸಿನ ಹುಡುಗನ ಮೇಲೆ ಹರಿಯಿತು. ನಾನು ಆತನನ್ನು ಕರೆದು 'ಏನಾದರೂ ಸಮಸ್ಯೆಯಿದೆಯಾ? ಯಾವ ಕೇಸಿನಲ್ಲಿ ಒಳಗಿರುವೆ?' ಎಂದು ವಿಚಾರಿಸಿದೆ. 'ಏನೂ ಸಮಸ್ಯೆ ಇಲ್ಲ, ಪೋಕ್ಸೋ ಕೇಸು' ಅಂದ.

ಕಾರಾಗೃಹ ಅಧೀಕ್ಷಕರು 'ಪೋಕ್ಸೋ ಕೇಸ್ ಮೇಡಂ. ಐದು ತಿಂಗಳಿನಿಂದ ಒಳಗೆ ಇದ್ದಾನೆ' ಎಂದರು.

'ಯಾವ ಊರು?' ಎಂದಾಗ ಉತ್ತರ ಕರ್ನಾಟಕದ ಹಳ್ಳಿಯ ಹೆಸರು ಹೇಳಿದ. ನನಗೆ ವಾಣಿಯ ಕೇಸು ನೆನಪಾಯಿತು. 'ಅದೇ ಪ್ರಕರಣವಾ?' ಎಂದು ಕೇಳಿದಾಗ ಅಧೀಕ್ಷಕರು ಹೌದೆಂದರು. 'ಯಾಕೆ ಇನ್ನು ಬೇಲ್ ಆಗಿಲ್ಲ?' ಎಂದದ್ದಕ್ಕೆ, 'ಯಾರೂ ಬೇಲ್ ಶ್ಯೂರಿಟಿ ಕೊಟ್ಟಿಲ್ಲ' ಎಂದರು.

ಆ ಬ್ಯಾರಕ್ ತಪಾಸಣೆ ಮುಗಿಸಿ ಹೊರ ಬಂದಾಗ ಕಾರಾಗೃಹ ಅಧೀಕ್ಷಕರು ಹತ್ತಿರ ಬಂದು ಮೆಲ್ಲಗೆ ಹೇಳಿದರು: 'ನೀವು ವಿಚಾರಿಸಿದಿರಲ್ಲಾ ಮೇಡಂ, ಆ ಹುಡುಗನಿಗೆ ಎಚ್‌ಐವಿ ಪಾಸಿಟಿವ್. ನಾವು ಕಾರಾಗೃಹಕ್ಕೆ ದಾಖಲಿಸಿಕೊಳ್ಳುವಾಗ ಪ್ರತಿಯೊಬ್ಬರ ಆರೋಗ್ಯ ತಪಾಸಣೆ ಪೂರ್ತಿಯಾಗಿ ಮಾಡಿಸುತ್ತೇವೆ. ಆಗ ಈ ವಿಷಯ ತಿಳಿಯಿತು' ಎಂದರು. ನನಗೆ ತಕ್ಷಣ ಆಘಾತವಾದಂತಾಯಿತು. ಅಂದರೆ ವಾಣಿಯ ಕಥೆಯೇನು?

'ಓ ದೇವರೇ ಇದೇನಿದು... ಹೀಗೇಕಾಯಿತು?' ಮನಸ್ಸು ಒದ್ದಾಡಿತು.

'ಆ ಹುಡುಗಿಗೆ ಏನಾಯಿತು?' ಎಂದು ಕೇಳಿದೆ.

'ಆ ಹುಡುಗಿಯನ್ನು ಈಗ ಪರೀಕ್ಷೆ ಮಾಡಿಸಬೇಕಾಗಿದೆ ಮೇಡಂ' ಎಂದರು.

ಕಾರಾಗೃಹ ತಪಾಸಣೆ ಮುಗಿಸಿ ಮನೆಗೆ ಬಂದವಳು ಟೇಬಲಿನ ಮೇಲೆ ತಲೆಯಿಟ್ಟು ಕಣ್ಮುಚ್ಚಿದೆ.

ಬದುಕಿನ ಬಗೆಗೆ ನೂರೆಂಟು ಕನಸು ಹೊತ್ತು ನಡೆದವರ ಬದುಕಿನಲ್ಲಿ ಇಂತಹ ತಿರುವುಗಳೇ? ಯಾರು ಹೊಣೆ?

ಪ್ರತಿಕ್ರಿಯಿಸಿ: feedback@sudha.co.in

# ಕಾಯಿಸಿಪ್ಪೆ ಅಂದ್ರೆ...

■ ಮಾಧವಿ ಎಸ್ ಭಂಡಾರಿ

ಆಗ ನನಗೆ ಹತ್ತೋ ಹನ್ನೆರಡೋ ವರ್ಷವಿದ್ದಿರಬೇಕು. ನಮ್ಮೂರಲ್ಲಿ ನ ಭೂತೋ ನ ಭವಿಷ್ಯತಿ ಎಂಬಂತಹ ಒಂದು ಘಟನೆ ನಡೆದಿತ್ತು. ಆ ಮಬ್ಬಾದ ಚಿತ್ರ ಇಂದಿಗೂ ನನ್ನ ಕಣ್ಣ ಮುಂದಿಂದ ಹಾದುಹೋಗುತ್ತಿರುವ ಅನುಭವ. ಆ ಘಟನೆ ಇಷ್ಟು ವರ್ಷಗಳ ನಂತರ ನೆನಪು ಮಾಡಿಕೊಂಡಾಗ ಧುತ್ತೆಂದು ಕಣ್ಮುಂದೆ ಬಂದದ್ದಲ್ಲ. ಅಂತಹ ಅಗಾಧ ನೆನಪಿನ ಶಕ್ತಿ ನನಗಿಲ್ಲ. ಆಗಾಗ ನಮ್ಮೂರು ಭುವನಗಿರಿಗೆ ಹೋದಾಗ ಅವರಿವರು ಆ ಬಗ್ಗೆ ಹೇಳುವಾಗೆಲ್ಲ ಅಥವಾ ನಾನು ಕೆದಕಿ ಕೇಳುವಾಗೆಲ್ಲ ಆ ಘಟನೆ ಮರುಹುಟ್ಟು ಪಡೆದುಕೊಳ್ಳುತ್ತಿತ್ತು.

ಈಗಲೂ ಹಿರಿಯರು ಆಡುವ ಒಂದು ಮಾತನ್ನು ಕೇಳಿ ಮರುಮಾತಾಡದೆ ನಾವು ಒಪ್ಪಿಕೊಳ್ಳುತ್ತೇವೆ. ಅದೇನೆಂದರೆ, ಕಲಿತವರೇ ಇಲ್ಲದ ಆಗಿನ ಕಾಲದಲ್ಲಿ ಮುಲ್ಕಿ (ಏಳನೆಯ ತರಗತಿ) ಪಾಸಾದರೆ ಸಾಕು, ಅವರು ಹೆಡ್ ಮಾಸ್ತರ್ ಆಗ್ತಿದ್ದರು. ನಮ್ಮ ಮಾವನವರ ಜ್ಞಾನಭಂಡಾರ ನೋಡಿ ನಾವು ಈಗಲೂ ಹೇಳುತ್ತೇವೆ – ಇವರಿಗೆ ಕಲಿಯುವ ಅವಕಾಶ ಸಿಕ್ಕಿದ್ದರೆ, ಇವರು ಕಲೆಕ್ಟರ್ ಆಗ್ತಿದ್ದರು. ಎಂಬತ್ತೆಂಟರ ಇಳಿವಯಸ್ಸಿನಲ್ಲೂ ಅವರು ದಿನಪತ್ರಿಕೆಯ ಪ್ರತಿಪುಟವನ್ನೂ ಓದುತ್ತಿದ್ದರು.

ಭುವನಗಿರಿಯ ಗುಡ್ಡದ ಮೇಲಾಗಲಿ ಕೆಳಗಾಗಲಿ ಶಾಲೆಯಿರಲಿಲ್ಲ. ಒಂದೂವರೆ ಮೈಲು ದೂರದ ಬೇಡ್ಕಣಿಯಲ್ಲಿ ಏಳನೆಯ ತರಗತಿವರೆಗಿನ ಶಾಲೆಯಿತ್ತು. ಆ ದಿನಗಳಲ್ಲಿ ಅಕ್ಕಪಕ್ಕದ ಆರೇಳು ಹಳ್ಳಿಯ ಮಕ್ಕಳು ಹೈಸ್ಕೂಲಿಗೆ ಹೋಗಬೇಕೆಂದರೆ ಐದು ಮೈಲು ದೂರದ ಸಿದ್ದಾಪುರಕ್ಕೆ ಹೋಗಬೇಕಿತ್ತು. ಅದರಿಂದಾಗಿ ಎಷ್ಟೋ ಹೆಣ್ಣುಮಕ್ಕಳಲ್ಲದೆ, ಕೆಲವು ಗಂಡುಮಕ್ಕಳೂ ಶಿಕ್ಷಣದಿಂದ ವಂಚಿತರಾಗಿದ್ದರು.

ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿರುವ ಶ್ರೀಮಂತರು ಬೇಡ್ಕಣಿಯ ಸುತ್ತಮುತ್ತ ಇದ್ದರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಶಾಲೆಯಲ್ಲಿರುವ ಕೆಲವು ಶಿಕ್ಷಕರು ಹೆಡ್ ಮಾಸ್ತರರನ್ನು ಹುರಿದುಂಬಿಸಿ ತಮ್ಮಲ್ಲಿ ಒಂದು ಹೈಸ್ಕೂಲ್ ಮಂಜೂರು ಮಾಡುವಂತೆ ರಾಜ್ಯ ಸರಕಾರಕ್ಕೆ ಮನವಿ ಪತ್ರ ಸಲ್ಲಿಸುವ ಪ್ರಸ್ತಾಪವನ್ನು ಮುಂದಿಟ್ಟರು. ನಮ್ಮೂರಲ್ಲಿ ಹೆಚ್ಚಿನವರಿಗೆ ಕನ್ನಡ, ಕೊಂಕಣಿ ಬಿಟ್ಟರೆ ಬೇರೆ ಯಾವ ಭಾಷೆಯೂ ಬರುತ್ತಿರಲಿಲ್ಲ. ಆದರೆ ಸರಕಾರದ ಅಧಿಕೃತ ಪತ್ರವ್ಯವಹಾರ ಇಂಗ್ಲಿಷ್‌ನಲ್ಲೇ ನಡೆಯುತ್ತಿತ್ತು. ಕಾರಣವಿಷ್ಟೆ, ಆಗ ಕನ್ನಡ... ಕನ್ನಡ... ಎಂಬ ಹೋರಾಟ ಶುರುವಾಗಿರಲಿಲ್ಲ. ಕನ್ನಡ ಕಡ್ಡಾಯ ಎಂದು ಕನ್ನಡ ಬಾವುಟ ಹಿಡಿಯುವವರ ಬಗ್ಗೆ ನನಗೇನೂ ತಿಳಿದಿಲ್ಲ. ಊರ ಮುಖಂಡರ ಹಾಗೂ ಪಂಚಾಯತ್ ಸದಸ್ಯರ ಸಹಾಯ ಪಡೆದು, ನಮ್ಮ ಹೆಡ್ ಮಾಸ್ತರರು ರಜೆಯಲ್ಲಿ ಊರಿಗೆ ಬಂದ ತಕ್ಕಮಟ್ಟಿನ ಇಂಗ್ಲಿಷ್ ಭಾಷೆ ಬರುವವನನ್ನು ಹಿಡಿದು, ನಮ್ಮೂರಿಗೆ ಒಂದು ಹೈಸ್ಕೂಲ್ ಮಂಜೂರು ಮಾಡಬೇಕೆಂಬ ಪ್ರಾರ್ಥನಾ ಪತ್ರವನ್ನು ಬರೆಸಿ ಸರಕಾರಕ್ಕೆ ಅಂಚೆ ಮೂಲಕ ರವಾನಿಸಿದರು.

ಆಗೆಲ್ಲ ಪತ್ರಗಳು ಟಪಾಲಿನಲ್ಲಿ ಹೋಗಿ ಟಪಾಲಿನಲ್ಲೇ ಬರುವುದು ವಾಡಿಕೆಯಾಗಿತ್ತು. ಎಷ್ಟೇ ದಿನಗಳಾದರೂ ಕಾಯುವುದು ಅನಿವಾರ್ಯವಾಗಿತ್ತು. ಕಾಯುವಿಕೆಗಿಂತ ತಪವು ಇನ್ನಿಲ್ಲ ಎಂಬಂತೆ ಸರಕಾರಿ ಲಕೋಟೆಯಲ್ಲಿ ಉತ್ತರವೂ ಬಂತು. ವಿಷಯ: ಎಂದು ಬರೆದ ಒಂದು ಸಾಲಿನಲ್ಲಿ 'ಪರ್ಮಿಟೆಡ್' ಎಂಬ ಒಂದು ಪದ ಆ ವಾಕ್ಯದ ಕೊನೆಯಲ್ಲಿತ್ತು. ಸುದ್ದಿ ತಿಳಿದು ಮಾಸ್ತರರ, ಶಿಕ್ಷಕಿಯರ, ಅಷ್ಟೇ ಅಲ್ಲ – ಊರ ಮುಖಂಡರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ತಿಮ್ಮಪ್ಪ ಸಾಹುಕಾರರು ತಮ್ಮ ತೋಟದ ಆಳು ಮಂಜನನ್ನು ಕರೆಸಿ ಹೇಳಿದರು, 'ಇವತ್ತು ನಿನಗೆ ತೋಟದಲ್ಲಿ ಅಡಿಕೆ ಹೆಕ್ಕುವ ಕೆಲಸ ಇಲ್ಲ. ಸೀದಾ ಸಿದ್ದಾಪುರಕ್ಕೆ ಹೋಗಿ